

ಕಾಮೇಗೌಡ ಅಕ್ಷಯ ಬಟ್ಟಲು

ಮಂಡ್ಯ ಜಿಲ್ಲೆಯ ದಾಸನದೊಡ್ಡಿ ಗ್ರಾಮದ ಕಾಮೇಗೌಡರ 'ಕೆರೆ–ಕಟ್ಟೆ ಪುರಾಣ' ಈಗ ದೇಶದಾದ್ಯಂತ ಪ್ರಸಿದ್ಧ. ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ 'ಮನದ ಮಾತು' ಬಾನುಲಿ ಕಾರ್ಯಕ್ರಮದಲ್ಲಿ ನೀರಗೌಡರ ಹೆಸರನ್ನು ಪ್ರಸ್ತಾಪಿಸಿದ್ದೇ ತಡ, ದೇಶದ ಮಾಧ್ಯಮಗಳೆಲ್ಲ 'ಯಾರೀ ಕಾಮೇಗೌಡ ಎಂದು' ಹುಡುಕಾಡಿ ವರದಿ ಮಾಡಿವೆ. ಸಾಮಾಜಿಕ ಜಾಲತಾಣಗಳಲ್ಲಿ ಗೌಡರಿಗೆ ಹೀರೊ ವರ್ಚಸ್ಸು ದೊರೆತಿದೆ. ಇದಾವುದೂ ತನಗೆ ಸಂಬಂಧಿಸಿದ್ದಲ್ಲ ಎನ್ನುವಂತೆ ಗೌಡರು ಮಾತ್ರ ಕುಂದನಿ ಬೆಟ್ಟದಲ್ಲಿ ನೀರತಾವುಗಳನ್ನು ಕಾಪಾಡುವ ಕೆಲಸದಲ್ಲಿ ಎಂದಿನಂತೆ ತೊಡಗಿಕೊಂಡಿದ್ದಾರೆ.

ನೀರಿನ ಮಹತ್ವದ ಬಗ್ಗೆ 12 ವರ್ಷದ ಹುಡುಗನಾಗಿದ್ದಾಗಲೇ ಕಾಮೇಗೌಡರಲ್ಲಿ ಅರಿವು ಮೂಡತೊಡಗಿತ್ತು. ಕುಂದನಿ ಬೆಟ್ಟದಲ್ಲಿ ಕುಡಿಯುವ ನೀರಿಗಾಗಿ ಪ್ರಾಣಿ–ಪಕ್ಷಿಗಳು ಪಡುತ್ತಿದ್ದ ಪಾಡನ್ನು ಕಂಡು ಮರುಗಿದ್ದರು. ಬಿರು ಬೇಸಿಗೆಯಲ್ಲಿ ಪಕ್ಷಿಗಳು ಮರದೆಲೆಯ ತೇವಾಂಶ ಚೀಪಿ ದಾಹ ತೀರಿಸಿಕೊಳ್ಳುತ್ತಿದ್ದದ್ದನ್ನು ಕಂಡು ಅವರ ಕಣ್ಣು ಹನಿಗೂಡಿದ್ದವು. ನೀರಿಲ್ಲದೆ ಕಾಡೆಮ್ಮೆ, ಹಂದಿ, ಜಿಂಕೆಗಳು ನರಳುವುದನ್ನು ಕಂಡು ಸಂಕಟಪಟ್ಟಿದ್ದರು. ಸ್ವತಃ ತಾವೇ ಬೆಟ್ಟದ ಮೇಲೆ ಕುರಿ ಮೇಯಿಸುತ್ತಾ ನೀರಿಗಾಗಿ ಮೈಲಿಗಟ್ಟಲೆ ಅಂಡಲೆದಿದ್ದರು. ಆ ಅಲೆದಾಟದಲ್ಲಿಯೇ, 'ಮಳೆರಾಯನಿಗಾಗಿ ಪ್ರಾರ್ಥಿಸುತ್ತಾ ಕುಳಿತರೆ ಪ್ರಾಣಿ–ಪಕ್ಷಿಗಳ ದಾಹ ತೀರುವುದಿಲ್ಲ, ಬೇರೆ ಏನನ್ನಾದರೂ ಮಾಡಲೇಬೇಕು' ಎಂಬ ಯೋಚನೆ ಮೊಳೆಯಿತು. ಕುರಿಗಳ ಜೊತೆ ಹಾರೆ, ಗುದ್ದಲಿ, ಪಿಕಾಸಿಯೊಂದಿಗೆ ಬೆಟ್ಟಕ್ಕೆ ತೆರಳುತ್ತಿದ್ದ ಕಾಮೇಗೌಡರು ಸಣ್ಣ ಸಣ್ಣ ಗುಂಡಿ ತೋಡಲು ಆರಂಭಿಸಿದರು. ನೀರ ಸೆಲೆಗಾಗಿ ಹುಡುಕಿ ಎರಡಡಿ, ಮೂರಡಿಗಳ ಸಣ್ಣಸಣ್ಣ ಗುಂಡಿ ತೋಡಿದರು. ಮಳೆ ಬಂದಾಗ ಗುಂಡಿಯಲ್ಲಿ ನೀರು ನಿಲ್ಲುವುದನ್ನು ಕಂಡು ಸಂಭ್ರಮಿಸಿದರು. ಮಳೆ ಇಲ್ಲದಿದ್ದಾಗಲೂ ಕೆಲವು ಗುಂಡಿಗಳಲ್ಲಿ ಜೀವಸೆಲೆ ಉಳಿದು ಪ್ರಾಣಿ–ಪಕ್ಷಿಗಳು ನೀರು ಕುಡಿಯುವುದನ್ನು ಕಂಡು ಬೆಟ್ಟದ ಮೇಲೆ ಕುಣಿದಾಡಿದ್ದರು.

ಶಾಲೆಯ ಮೆಟ್ಟಿಲನ್ನೇ ಹತ್ತದ ಕಾಮೇಗೌಡರಿಗೆ ಲೋಕಶಿಕ್ಷಣಕ್ಕೇನೂ ಕೊರತೆ ಇಲ್ಲ. ಆಕಾಶವಾಣಿ, ಹಳ್ಳಿ ನಾಟಕಗಳೇ ಅವರ ಜ್ಞಾನಭಂಡಾರ. 'ಕುಡಿಯುವ ನೀರು ದಾನ ಮಾಡಿದವರು ಸ್ವರ್ಗಕ್ಕೆ ಹೋಗುತ್ತಾರೆ' ಎನ್ನುವುದು ಅವರ ನಂಬಿಕೆ.

ಮಳವಳ್ಳಿ ತಾಲ್ಲೂಕಿನ ಕುಂದೂರು ಮತ್ತು ದಾಸನದೊಡ್ಡಿ ಗ್ರಾಮಗಳ ನಡುವೆ ಇರುವ ಕುಂದನಿ ಬೆಟ್ಟ ತನ್ನ ಲಿಂಗಾಕಾರದಿಂದ ಜನರ ಗಮನ ಸೆಳೆದಿದೆ. 'ಕುಂದೂರು ಬೆಟ್ಟ' ಎಂದೂ ಇದನ್ನು ಕರೆಯುತ್ತಾರೆ. ಸಿದ್ದಪ್ಪಾಜಿ ಗೀತೆಗಳಲ್ಲಿ ಈ ಬೆಟ್ಟದ ಪ್ರಸ್ತಾಪ ಇದೆ. ದಾಸನದೊಡ್ಡಿ ಗ್ರಾಮದ ಕಾಮೇಗೌಡರ ಮನೆಯಿಂದ ಈ ಬೆಟ್ಟ ಅರ್ಧ ಕಿ.ಮೀ. ದೂರದಲ್ಲಿದೆ. ಬೆಟ್ಟದ ತಪ್ಪಲಲ್ಲಿ ಕಾಮೇಗೌಡರಿಗೆ ತುಂಡುಭೂಮಿಯೂ ಇದೆ.

ಬೆಟ್ಟದಲ್ಲಿ ಆರಂಭದಲ್ಲಿ ಗುಂಡಿ ತೋಡುತ್ತಿದ್ದ ಕಾಮೇಗೌಡರು ನಂತರ ಅದನ್ನೇ ಕೊಂಚ ದೊಡ್ಡದು ಮಾಡಿ ಹೊಂಡ ಮಾಡಿದರು. ಹೊಂಡದ ವ್ಯಾಪ್ತಿಯನ್ನು ಇನ್ನೂ ಸ್ವಲ್ಪ ದೊಡ್ಡದು ಮಾಡಿದ ಅವರು ಸುತ್ತಲೂ ಕಲ್ಲು ಕಟ್ಟಡ ನಿರ್ಮಿಸಿ ಕಟ್ಟೆಯ ರೂಪ ನೀಡಿದರು. 12ನೇ ವಯಸ್ಸಿನಲ್ಲಿ ಕುರಿಗಳನ್ನು ಮಾರಾಟ ಮಾಡಿ ಕಟ್ಟೆ ಕಾರ್ಯ ಆರಂಭಿಸಿದ ಅವರು, ಈಗ 84ರ ಹರೆಯದಲ್ಲೂ ತಮ್ಮ ನೀರಕಾಯಕ ಮುಂದುವರಿಸಿದ್ದಾರೆ. ಇಲ್ಲಿಯವರೆಗೂ 16 ಕಟ್ಟೆ ತೋಡಿಸಿದ್ದಾರೆ, ಪ್ರತಿ ಕಟ್ಟೆಗೂ ಒಂದೊಂದು ಹೆಸರು ಕೊಟ್ಟಿದ್ದಾರೆ. ಆ ಕಟ್ಟೆಗಳ ನಾಮಪುರಾಣ ಸ್ವಾರಸ್ಯಕರವಾಗಿದೆ; ಕಾಮೇಗೌಡರ ನೀರಹಾದಿಯ ಸಾಹಸವನ್ನು ಕಟ್ಟಿಕೊಡುವಂತಿದೆ. ಬನ್ನಿ, ಆ ಕಟ್ಟೆಗಳ ಕಥೆ ಕೇಳೋಣ.

## 'ಅಕ್ಷಯ ಪಾತ್ರೆ'ಯ ಮುನ್ನುಡಿ

ಕಾಮೇಗೌಡರು ಬೆಟ್ಟದ ತಪ್ಪಲಲ್ಲಿ ಸಣ್ಣ ಸಣ್ಣ ಗುಂಡಿ, ಹೊಂಡ ನಿರ್ಮಾಣ ಮಾಡುವಾಗ ಆರಂಭದಲ್ಲಿ ಅಕ್ಕಪಕ್ಕದ ಗ್ರಾಮಗಳ ಜನರ ಲೇವಡಿಗೆ ಗುರಿಯಾಗಿದ್ದರು. ಕೆಲವರಂತೂ ದನಕರುಗಳಿಂದ ತುಳಿಸಿ ಹೊಂಡಗಳನ್ನು ಮುಚ್ಚಿಬಿಡುತ್ತಿದ್ದರು. ಮತ್ತೆ



> ಪ್ರಧಾನಿ ನನ್ನ ಕೆಲಸದ ಬಗ್ಗೆ ಮಾತನಾಡುತ್ತಾರೆ ಎಂದು ಕನಸಿನಲ್ಲೂ ಎಣಿಸಿರಲಿಲ್ಲ. ಪ್ರಾಣಿ ಪಕ್ಷಿಗಳಿಗೆ ನೀರು ಉಣಿಸುವುದೇ ನನ್ನ ಉದ್ದೇಶವಾಗಿತ್ತು. ಪ್ರಶಸ್ತಿಯ ರೂಪದಲ್ಲಿ ಜನರು ಅಪಾರ ಹಣ ಕೊಟ್ಟರು. ಎಲ್ಲಾ ಹಣ ತಂದು ಕಟ್ಟೆ ಕಟ್ಟಿಸಿದೆ...